ಪ್ರಸ್ತುತದಲ್ಲಿ ಮೇಲಿನ ಬಾಕಿ ಕಾಮಗಾರಿಗಳನ್ನು ಬೇರೆ ಸಮಾಲೋಚಕರನ್ನು ನೇಮಿಸಿ ಕೈಗೊಳ್ಳಲಾಗುತ್ತಿದೆ.

ಇ) ಮೆ.ಎನ್.ಆರ್.ಎಸ್.ಎ ಸಂಸ್ಥೆಯು ಪಶ್ಚಿಮಾಭಿಮುಖವಾಗಿ ಮತ್ತು ಪೂರ್ವಾಭಿಮುಖವಾಗಿ ಹರಿಯುವ ಜಲಾನಯನ ಪ್ರದೇಶದಿಂದ ಒಟ್ಟಾರೆ 163 ಟಿ.ಎಂ.ಸಿ ನೀರಿನ ಲಭ್ಯತೆಯ ವರದಿಯನ್ನು ನೀಡಿರುತ್ತದೆ. ಸದರಿ ವರದಿಯ ಪ್ರತಿಯನ್ನು ಒದಗಿಸಲಾಗಿದೆ. ಮಾಲಾ ಕಾಲುವೆಗಳ ವೈಮಾನಿಕ ಸಮೀಕ್ಷೆಯ ವಿವರಗಳಾದ ಡಿ.ಇ.ಎಂ ಮ್ಯಾಪ್, ಆರ್ಥೋ ಫೋಟೊಗಳು, ಕಾಂಟೂರು ಮಾಪ್‌ಗಳನ್ನು ಸಾಫ್ಟ್ ಪ್ರತಿಯಲ್ಲಿ (ಸುಮಾರು 130 ಜಿ.ಬಿ) ಒದಗಿಸಿರುತ್ತದೆ. ಉಳಿದಂತೆ ಸಂಸ್ಥೆಯು ಯಾವುದೇ ನಿರ್ದಿಷ್ಟ ಸಲಹೆಗಳನ್ನು ನೀಡಿರುವುದಿಲ್ಲ. ಮಾಲಾ ಕಾಲುವೆಗಳ ವೈಮಾನಿಕ ಸಮೀಕ್ಷೆಯ ಮಾಹಿತಿಗಳನ್ನು ಉಪಯೋಗಿಸಿಕೊಂಡು ಮತ್ತು ಉಳಕೆ ಸೇವಾ ಕಾಲುವೆಗಳ ಸರ್ವೆ ಕೈಗೊಂಡು ವಿವರವಾದ ಯೋಜನಾ ವರದಿ ತಯಾರಿಸಬೇಕಾಗಿರುತ್ತದೆ. .

ಈ) ಬಯಲು ಸೀಮೆ ಪ್ರದೇಶಗಳ ಜಿಲ್ಲೆಗಳಲ್ಲಿ ನೀರಿನ ಅಭಾವದ ಹಿನ್ನಲೆಯಲ್ಲಿ ಕುಡಿಯುವ ನೀರು ಮತ್ತು ಅಂತರ್ಜಲ ಅಭಿವೃದ್ಧಿಗಾಗಿ ಶಾಶ್ವತ ನೀರು ಒದಗಿಸುವ ಯೋಜನೆಗೆ ಸರ್ಕಾರವು ಬದ್ಧವಾಗಿರುತ್ತದೆ. ಈ ಹಿನ್ನಲೆಯಲ್ಲಿ ಮೆ.ಎನ್.ಆರ್.ಎಸ್.ಎ ಸಂಸ್ಥೆಯ ಮಾಹಿತಿ ಉಪಯೋಗಿಸಿಕೊಂಡು, ಉಳಿಕೆ ಸೇವಾ ಕಾಲುವೆ ಸರ್ವೆ ಮತ್ತು ಯೋಜನಾ ವರದಿ ತಯಾರಿಸುವ ಕಾರ್ಯಕ್ಕೆ ಪ್ರತ್ಯೇಕ ಟೆಂಡರ್ ಪ್ರಕ್ರಿಯೆ ಕೈಗೊಂಡು ಮೆ.ಯು.ಆರ್.ಎಸ್. ಸ್ಕಾಟ್ ವಿಲ್ಸನ್ ಇಂಡಿಯಾ ಪ್ರೈ. ಲಿ, ನವದೆಹಲಿ ಸಂಸ್ಥೆಗೆ ದಿನಾಂಕ 24.8.2012ರಂದು ಈ ಕಾರ್ಯವನ್ನು ವಹಿಸಲಾಗಿದೆ. ಯೋಜನಾ ವರದಿ ತಯಾರಿಸುವ ಕಾರ್ಯಕ್ಕೆ 11 ತಿಂಗಳ ಕಾಲಾವಕಾಶ ನಿಗದಿಪಡಿಸಲಾಗಿದ್ದು, ಯೋಜನಾ ವರದಿ ತಯಾರಿಸಿದ ನಂತರ ಸಾಧಕ-ಬಾಧಕಗಳನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಕುಡಿಯುವ ನೀರಿನ ತೊಂದರೆ

297 : (474)

ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್ (ಜಮಖಂಡಿ)

ಪ್ರಶ್ನೆ

ಅ) ಜಾನಪದ ಸಾಹಿತ್ಯದ ಅಭಿವೃದ್ಧಿಗಾಗಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಆ) ಜಾನಪದ ಸಾಹಿತ್ಯದ ದಾಖಲೀಕರಣವಾಗಬೇಕಾದುದು ಹಾಗೂ ಅದನ್ನು ಕಡಿಮೆ ಸಮಯದಲ್ಲಿ ಸಾರ್ವಜನಿಕರಿಗೆ ತಿಳಿಯುವಂತೆ ಮಾಡುವುದು ಅನಿವಾರ್ಯವಲ್ಲದೇ;

ಇ) ಅನಿವಾರ್ಯವಾದಲ್ಲಿ, ಇದಕ್ಕಾಗಿ ಸರ್ಕಾರ ನೀಡುವ ಅನುದಾನವೆಷ್ಟು?

ಶ್ರೀ ಗೋವಿಂದ ಎಂ.ಕಾರಜೋಳ (ಮಾನ್ಯ ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಜವಳಿ ಸಚಿವರು)

ಉತ್ತರ

ಅ) ಕರ್ನಾಟಕ ಸರ್ಕಾರವು ಜಾನಪದ ಸಾಹಿತ್ಯದ ಅಭಿವೃದ್ಧಿಗಾಗಿ ಕರ್ನಾಟಕ ಜಾನಪದ ಅಕಾಡೆಮಿಯನ್ನು, ಜಾನಪದ ವಿಶ್ವವಿದ್ಯಾಲಯವನ್ನು ಹಾವೇರಿ ಜಿಲ್ಲೆಯಲ್ಲಿ ಮತ್ತು ಚಾಮರಾಜನಗರ ಜಿಲ್ಲೆ ಮಲೆಮಹದೇಶ್ವರ ಬೆಟ್ಟದಲ್ಲಿ ಜಾನಪದ ಅಧ್ಯಯನ ಸಂಸ್ಥೆಯನ್ನು ಸ್ಥಾಪನೆ ಮಾಡಿದೆ. ಈ ಮೂಲಕ ಜಾನಪದ ಸಾಹಿತ್ಯದ ಸಮಗ್ರ ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಗೊಳಿಸುವುದು ಸರ್ಕಾರದ ಧ್ಯೇಯೋದ್ದೇಶವಾಗಿದೆ.

ಆ) ಹೌದು.

ಇ) ಪರಿಶೀಲಿಸಿ ಅಗತ್ಯ ಅನುದಾನ ನೀಡಲಾಗುವುದು.

ಐ.ಟಿ.ಐ. ಕಾಲೇಜು ಪ್ರಾರಂಭ

339 (548)

ಶ್ರೀ ಶ್ರೀನಿವಾಸ್ (ವಾಸು) ಎಸ್.ಆರ್. (ಗುಬ್ಬಿ)

ಪ್ರಶ್ನೆ

ಅ) ಗುಬ್ಬಿ ತಾಲ್ಲೂಕಿನಲ್ಲಿ ಐ.ಟಿ.ಐ. ಕಾಲೇಜನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು.

ಇ) ಗುಬ್ಬಿ ಪಟ್ಟಣದಲ್ಲಿ ಐ.ಟಿ.ಐ. ಕಾಲೇಜನ್ನು ತೆಗೆಯಲು ಸ್ಥಳವನ್ನು ಗುರುತಿಸಲಾಗಿದೆಯೇ?

ಈ) ಹಾಗಿದ್ದಲ್ಲಿ, ಪಟ್ಟಣದ ಯಾವ ಭಾಗದಲ್ಲಿ ಗುರುತಿಸಲಾಗಿದೆ? (ವಿವರಗಳನ್ನು ನೀಡುವುದು)